**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ.**

**ಸಿ.ಸಿ ಸಂಖ್ಯೆ :: 276/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಅಬ್ದುಲ್ ಸಾದಿಕ್ | **PW**-01 |
| **ತಂದೆಯ ಹೆಸರು** | : | ಮೆದನಬ್ಬ ಟಿ.ಎ | **CW**-08 |
| **ವಯಸ್ಸು** | : | 36 ವರ್ಷ | |
| **ಉದ್ಯೋಗ** | : | ವ್ಯಾಪಾರ | |
| **ವಾಸಸ್ಥಳ** | : | ಅಡ್ಡಗದ್ದೆ, ಶೃಂಗೇರಿ ತಾ. | |

**ದಿನಾಂಕಃ05-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

ದಿಃ 23-06-2025 ರಂದು ಸಂಜೆ 7.40 ನಾನು ಅಡ್ಡಗದ್ದೆಯಲ್ಲಿರುವ ನನ್ನ ಮನೆಯ ಮುಂಭಾಗದಲ್ಲಿ ನಿಂತಿದ್ದಾಗ ನ್ಯಾಷನಲ್ ಹೈವೇ-169 ರಲ್ಲಿ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಮದ್ ರವರ ಹಿಂಬದಿಯಿಂದ ಶೃಂಗೇರಿ-ಕೊಪ್ಪ ಕಡೆಗೆ ಹೋಗುತ್ತಿದ್ದ ಕೆ.ಎ-20/ಎಮ್ -9845 ಆಲ್ಟೋ ಕಾರ್ ನ ಚಾಲಕ ಸದರಿ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸುತ್ತಿದ್ದ ಪರಿಣಾಮ ಸದರಿ ಮಹಮದ್ ರವರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದರು. ಸದರಿ ಅಪಘಾತದಿಂದ ಮಹಮದ್ ರವರ ತಲೆಗೆ, ಕೈಗೆ ಮತ್ತು ಸೊಂಟಕ್ಕೆ ತೀವ್ರ ಸ್ವರೂಪದ ಗಾಯಗಳು ಆದವು.

2. ನಂತರ ನಾನು ತಕ್ಷಣ ಅಪಘಾತ ಸ್ಥಳಕ್ಕೆ ಬಂದೆ ತದ ನಂತರ ಅಲ್ಲಿಗೆ ಚಾಸಾ-1 ರವರು ಬಂದರು ಆ ಸಂದರ್ಭದಲ್ಲಿ ಅದೇ ದಾರಿಯಲ್ಲಿ ಬರುತ್ತಿದ್ದ ಓಮಿನಿ ಕಾರ್ ನಲ್ಲಿ ಮಹಮದ್ ರವರನ್ನು ಶೃಂಗೇರಿಯಲ್ಲಿರುವ ಧನ್ವಂತರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆವು. ವೈದ್ಯರು ಮಹಮದ್ ರವರನ್ನು ಪರೀಕ್ಷಿಸಿ ಅವರು ಮರಣ ಹೊಂದಿರುವುದಾಗಿ ನಮಗೆ ತಿಳಿಸಿದರು. ನಂತರ ಅದೇ ದಿನ ನಾನು ಮತ್ತು ಚಾಸಾ-1 ರವರು ಪೋಲೀಸ್ ಠಾಣೆಗೆ ರಾತ್ರಿ 9.00 ಗಂಟೆಗೆ ಹಾಜರಾಗಿ ಚಾಸಾ-1 ರವರು ಅಲ್ಲಿ ದೂರು ನೀಡಿರುತ್ತಾರೆ.

3. ನಂತರ ದಿಃ24-06-2025 ರಂದು ಪೋಲೀಸಿನವರು ಅಪಘಾತ ನಡೆದ ಸ್ಥಳಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ನಾನು ಸಹ ಹಾಜರಿದ್ದೆ. ಸದರಿ ಅಪಘಾತವಾದ ಸ್ಥಳವನ್ನು ನಾನು ತೋರಿಸಿದಂತೆ ಪೋಲೀಸರು ಸ್ಥಳದಲ್ಲಿಯೇ ಪಂಚ ಸಾಕ್ಷಿದಾರರಾದ ಚಾಸಾ-9 ಮತ್ತು ಚಾಸಾ-10 ರವರ ಸಮಕ್ಷಮ ಸ್ಥಳದಲ್ಲಿಯೇ ಸ್ಥಳ ಪಂಚನಾಮೆಯನ್ನು ಬರೆದುಕೊಂಡರು. ಅದೇ ಸಂದರ್ಭದಲ್ಲಿ ಚಾಸಾ-1 ರವರು ಸಹ ಹಾಜರಿದ್ದರು. ಪೋಲೀಸರು ಸ್ಥಳದಲ್ಲಿಯೇ ಬಿದ್ದಿದ್ದ ಮಹಮದ್ ರವರ 1 ಜೊತೆ ಚಪ್ಪಲಿಯನ್ನು ಅಮಾನತು ಪಡಿಸಿಕೊಂಡರು. ಸದರಿ ಸ್ಥಳ ಮತ್ತು ಅಮಾನತು ಪಂಚನಾಮೆಯನ್ನು ಸಂಜೆ 6 ಗಂಟೆಯಿಂದ ಸಂಜೆ 7 ಗಂಟೆವರೆಗೂ ಪೋಲೀಸರು ದಾಖಲಿಸಿಕೊಂಡರು.

4. ಈಗ ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-2 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಗಿರುತ್ತದೆ. ಅದೇ ಸಂದರ್ಭದಲ್ಲಿ ಪೋಲೀಸರು 2 ಭಾವ ಚಿತ್ರಗಳನ್ನು ತೆಗೆದುಕೊಂಡರು ಸಾಕ್ಷಿಯು ಸದರಿ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮೃತರ ಒಂದು ಜೊತೆ ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಅಪಘಾತ ಮಾಡಿದ ಕಾರನ್ನು ಓಡಿಸುತ್ತಿದ್ದ ಚಾಲಕರು ಎಂದು ಗುರುತಿಸಿರುತ್ತಾರೆ. ನಾನು ಈ ಪ್ರಕರಣದಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.H.R.U ವಕೀಲರಿಂದ ::**

ನಮ್ಮ ಮನೆ ಮತ್ತು ಚಾಸಾ-1 ರವರ ಮನೆ ಒಂದೇ ಸಮುಚ್ಚಯದಲ್ಲಿದೆ ಎಂದರೆ ಸರಿ. ನಮ್ಮ ಮನೆ ನ್ಯಾಷನಲ್ ಹೈವೇ-169 ರಸ್ತೆಗಿಂತ 7-8 ಅಡಿ ಎತ್ತರದಲ್ಲಿದೆ ಎಂದರೆ ಸರಿ. ನಮ್ಮ ಮನೆ ನ್ಯಾಷನಲ್ ಹೈವೇ-169 ಇಂದ ಸುಮಾರು 4 ಮೀಟರ್ ಅಂತರದಲ್ಲಿದೆ. ಅಪಘಾತವಾಗುವ ಸಂದರ್ಭದಲ್ಲಿ ಅಲ್ಲಿ ಕತ್ತಲಿತ್ತು ಮತ್ತು ಮಳೆ ಬರುತ್ತಿತ್ತು ಎಂದರೆ ಸರಿ. ಅಪಘಾತವಾಗುವ ಪೂರ್ವದಲ್ಲಿ ಮೃತ ಮಹಮದ್ ರವರು ಶೃಂಗೇರಿಯಿಂದ ಕೊಪ್ಪಕ್ಕೆ ಸಾಗುವ ನ್ಯಾಷನಲ್ ಹೈವೇ-169 ರಲ್ಲಿ ಛತ್ರಿಯನ್ನು ಹಿಡಿದುಕೊಂಡು ನಡೆದುಕೊಂಡು ಬರುತ್ತಿದುದ್ದನ್ನು ನಾನು ನೋಡಿರುತ್ತೇನೆ.

2. ಸಾಮಾನ್ಯವಾಗಿ ಹೆದ್ದಾರಿ ರಸ್ತೆಗಳಲ್ಲಿ ರಸ್ತೆ ದಾಟಬೇಕಾದರೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನ ಬರುತ್ತಿರುವ ವಿಚಾರವನ್ನು ಗಮನಿಸಿ ತದ ನಂತರ ರಸ್ತೆ ದಾಟಬೇಕಾಗಿರುತ್ತದೆ ಎಂದರೆ ಸರಿ. ನ್ಯಾಷನಲ್ ಹೈವೇ-169 ರಸ್ತೆಯು ಎ.ಒನ್ ಚಿಪ್ಸ್ ಅಂಗಡಿಯಿಂದ ಸುಮಾರು 1 ಕಿ.ಮೀ ಉದ್ದ ನೇರವಾದ ರಸ್ತೆ ಇದೆ ಮತ್ತು ಸಮದಟ್ಟವಾದ ಪ್ರದೇಶದಲ್ಲಿದೆ ಎಂದರೆ ಸರಿ. ಆದ್ದರಿಂದ ಸದರಿ ರಸ್ತೆಯಲ್ಲಿ ಓಡಾಡುವ ವಾಹನಗಳು ವೇಗವಾಗಿ ಸಂಚರಿಸುತ್ತವೆ ಎಂದರೆ ಸರಿ. ಸದರಿ ನ್ಯಾಷನಲ್ ಹೈವೇ-169 – 40 ಅಡಿ ಅಗಲದ ರಸ್ತೆ ಆಗಿರುತ್ತದೆ ಎಂದರೆ ಇರಬಹುದು. ಮೃತ ಮಹಮದ್ ರವರು ಛತ್ರಿಯನ್ನು ಅಡ್ಡಲಾಗಿ ಇಟ್ಟುಕೊಂಡು ಎರಡೂ ಬದಿಗಳಲ್ಲಿ ಬರುತ್ತಿದ್ದ ವಾಹನಗಳನ್ನು ಗಮನಿಸದೇ ಅಜಾಗರೂಕತೆಯಿಂದ ಮಸೀದಿಗೆ ಹೋಗುವ ತರಾತುರಿಯಲ್ಲಿ ರಸ್ತೆಯನ್ನು ದಾಟಿದ ಪರಿಣಾಮ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

3. ಆರೋಪಿತರು ಅತಿವೇಗ ಮತ್ತು ಅಜಾಗರೂಕತೆಯಿಂದ ಆ ದಿನ ವಾಹನವನ್ನು ಚಲಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಮಹಮದ್ ರವರು ಅಪಘಾತವಾದ ಸಂದರ್ಭದಲ್ಲಿ ಟಾರ್ ರಸ್ತೆಯಿಂದ ಹೊರಭಾಗಕ್ಕೆ ಇರುವ ಮಣ್ಣಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ನಿಪಿ-2 ಮಹಜರ್ ಗೆ ನಾನು ಓದಿ ಅರ್ಥ ಮಾಡಿಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿರುವ ನಕ್ಷೆಯನ್ನು ಸಹ ನಾನು ತಿಳಿದುಕೊಂಡಿರುತ್ತೇನೆ. ನಿಪಿ-2 ರಲ್ಲಿರುವ ನಕ್ಷೆಯಂತೆ ಮಹಮದ್ ರವರಿಗೆ ಅಪಘಾತ ಟಾರ್ ರಸ್ತೆಯ ಮೇಲೆ ಕೃತ್ಯ ಸಂಭವಿಸಿರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಮೃತ ಮಹಮದ್ ರವರ ಚಪ್ಪಲಿಗಳು ಅಪಘಾತವಾದ ಸ್ಥಳದಲ್ಲಿಯೇ ರಸ್ತೆಯ ಮೇಲೆ ಬಿದಿದ್ದವು. ನಾನು ಮತ್ತು ಮೃತ ಮಹಮದ್ ರವರು ಸಂಬಂಧಿಕರು ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಲ್ಲಿ ನೋಡದೇ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಿಸಿರುವುದಿಲ್ಲ ಮತ್ತು ಆ ಕಾರಣದಿಂದ ಸದರಿ ಅಪಘಾತ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಮಹಮದ್ ರವರು ಮಸೀದಿಗೆ ಹೋಗುವ ಅವಸರದಲ್ಲಿ ಅವರು ಛತ್ರಿಯನ್ನು ಹಿಡಿದುಕೊಂಡು ಹೋಗುತ್ತಿದ್ದರಿಂದ ರಸ್ತೆಯ ಎರಡೂಬದಿಗಳಲ್ಲಿ ಬರುತ್ತಿದ್ದ ವಾಹನಗಳನ್ನು ನೋಡದೇ ತರಾ-ತುರಿಯಲ್ಲಿ -

ರಸ್ತೆಯನ್ನು ದಾಟಿದ ಕಾರಣ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ -2 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.